ಅಸಲು ದಾವಾ ಸಂಖ್ಯೆ.132/2022

ಪಿ.ಡಬ್ಲು. 1

**ಸಾಕ್ಷಿಯನ್ನು ದಿನಾಂಕಃ 16.10.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲು ಃ ಶ್ರೀ ಪಿ.ಎ.ಪಿ. ಪ್ರತಿವಾದಿ ಪರ ವಕೀಲರಿಂದಃ**

ನಾನು ಈ ದಾವೆ ತಮ್ಮಣ್ಣನ ಮೇಲೆ ದಾಖಲಿಸಿರುತ್ತೇನೆ. ಪ್ರತಿವಾದಿ ನನಗೆ ದಾರಿಯಲ್ಲಿ ಹಾಯ್ದಾಡಲು ತೊಂದರೆ ಕೊಡುತ್ತಿದ್ದಕ್ಕೆ ಈ ದಾವೆ ದಾಖಲಿಸಿದ್ದೇನೆ. ನನ್ನ ಮನೆತನ ಆಸ್ತಿಗಳಿಗೆ ಸಂಬಂದಿಸಿದಂತೆ ಪಾಲು ವಾಟ್ನಿ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕಬಂದಿ ನನಗೆ ಹೇಳಲು ಬರುವುದಿಲ್ಲ.

ನಮ್ಮ ಮನೆತನದ ಆಸ್ತಿಗಳಲ್ಲಿ ಪಾಲು ಆದಾಗಿನಿಂದ ನಾನು ಮತ್ತು ಪ್ರತಿವಾದಿ ಬೇರೆ ಬೇರೆ ವಾಸಿಸುತ್ತಿದ್ದೇವೆ ಎಂದರೆ ಸರಿ. ಪಾಲು ವಾಟ್ನಿ ಆಗುವ ಪೂರ್ವದಲ್ಲಿ ಪ್ರತಿವಾದಿ ಭಾರತೀಯ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

ಪಾಲು ವಾಟ್ನಿಯಾದ ಮೇಲೆ ಪ್ರತಿವಾದಿ ತನ್ನ ಸರ್ಕಾರಿ ನೌಕರಿಯಿಂದ ನಿವೃತ್ತಿಯಾಗಿ ಊರಿಗೆ ಮರಳಿ ಬಂದ ಎಂದರೆ ಸರಿ. ನಿವೃತ್ತಿ ನಂತರ ಪ್ರತಿವಾದಿ ತನ್ನ ಪಾಲಿನ ಆಸ್ತಿಯಲ್ಲಿ ಅಭಿವೃದ್ಧಿ ಕೆಲಸ ಮಾಡಿಕೊಂಡ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಮೀನಿನ ದಕ್ಷಿಣದ ದಂಡೆ ಗುಂಟ ಮನೆ ಕಟ್ಟಿಕೊಂಡಿದ್ದಾನೆ ಎಂದರೆ ಸರಿ. ಸದರಿ ಮನೆ ಕಟ್ಟಿ ಅಂದಾಜು 30 ವರ್ಷಗಳು ಆಗಿರಬಹುದು ಎಂದರೆ ಸರಿ. ಅದೇ ರೀತಿ ಮನೆಯ ಬಾಜು ಒಂದು ದನದ ಶೆಡ್ಡ ನಿರ್ಮಿಸಿಕೊಂಡಿದ್ದಾನೆ ಎಂದರೆ ಸಾಕ್ಷಿ ಇತ್ತಿತ್ತಲಾಗಿ ನಿರ್ಮಿಸಿದ್ದಾನೆ ಎಂದು ನುಡಿಯುತ್ತಾರೆ.

ಅದೇ ರೀತಿ ಪ್ರತಿವಾದಿ ತನ್ನ ಮನೆಯ ಪಕ್ಕ ಟ್ರಾಕ್ಟರ ನಿಲ್ಲಿಸಲು ಶೆಡ್ಡ ನಿರ್ಮಿಸಿದ್ದಾನೆ ಎಂದರೆ ಸ್ವಲ್ಪ ದಿನಗಳ ಹಿಂದೆ ಹಾಕಿದ್ದಾನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಜಮೀನಿನ ದಕ್ಷಿಣ ಬಾಜು ದಂಡೆಗುಂಟ ಮೂರು ಬೋರವೆಲ್ ಹಾಕಿಸಿದ್ದಾನೆ ಎಂದರೆ ಸಾಕ್ಷಿ ಅವು ಕೂಡಾ ಈಗ ಹಾಕಿಸಿದ್ದಾನೆ ಹಾಗೂ ಅವು ದಾರಿಬಿಟ್ಟು ಇವೆ ಎಂದು ನುಡಿಯುತ್ತಾರೆ. ಸದರಿ ಬೋರವೆಲ್ಲಗಳನ್ನು ಅಂದಾಜು 20, 25 ವರ್ಷಗಳ ಹಿಂದ ಹಾಕಿಸಿದ್ದಾನೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ಐದಾರು ವರ್ಷಗಳ ಹಿಂದೆ ಹಾಕಿಸಿದ್ದಾನೆ ಎಂದು ನುಡಿಯುತ್ತಾರೆ.

ಪ್ರತಿವಾದಿ 25 ವರ್ಷಗಳ ಹಿಂದೆ ಆ ಬೋರವೆಲ ಹಾಕಿಸಿ ನೀರಾವರಿ ಉದ್ದೇಶಕ್ಕೆ ಒಂದು ಟಿಸಿ ಕೂಡಿಸಿದ್ದಾನೆ ಎಂದರೆ ಸಾಕ್ಷಿ 10 ವರ್ಷಗಳ ಹಿಂದೆ ಕೂಡಿಸಿದ್ದಾನೆ ಎಂದು ನುಡಿಯುತ್ತಾರೆ. ಸದರಿ ಟಿಸಿ ಪ್ರತಿವಾದಿಯ ಜಮೀನಿನ ದಕ್ಷಿಣ ದಂಡೆಯ ಪೂರ್ವದ ಕಡೆಗೆ ಕೂಡಿಸಿದ್ದಾನೆ ಎಂದರೆ ಸರಿ ಮುಂದುವರೆದು ಸಾಕ್ಷಿ ಪ್ರತಿವಾದಿ ಅದನ್ನು ದಾರಿಯಲ್ಲಿ ಕೂಡಿಸಿದ್ದಾನೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಟಿಸಿ ಕೂಡಿಸುವ ಕಾಲಕ್ಕೆ ಅಲ್ಲಿ ಕೂಡಿಸಬೇಡ ಎಂದು ತಕರಾರು ಮಾಡಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಮನೆಯ ಬಾಜು ದನದ ಶೆಡ್ಡ ಮತ್ತು ಟ್ರಾಕ್ಟರ ನಿಲ್ಲಿಸಲು ಶೆಡ್ಡು ಇತ್ತಿತಲಾಗಿ ನಿರ್ಮಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜಮೀನಿಗೆ ಬರಲು ನನಗೆ ಯಾದವಾಡ ಮುಧೋಳ ಮುಖ್ಯ ರಸ್ತೆಯಿಂದ ಪ್ರತಿವಾದಿ ಜಮೀನಿನ ಉತ್ತರ ದಂಡೆ ಗುಂಟ 12 ಪೂಟಿನ ರಸ್ತೆ ಇದೆ ಎಂದರೆ ಸರಿಯಲ್ಲ. ಪಾಲು ವಾಟ್ನಿ ಆದಾಗಿನಿಂದಲೂ ನಾನು ಪ್ರತಿವಾದಿ ಜಮೀನಿನ ಉತ್ತರ ದಂಡೆಗುಂಟ ಇರುವ ರಸ್ತೆಯನ್ನೆ ಉಪಯೋಗಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಮೂಲಕ ನನ್ನ ಕೃಷಿ ಕೆಲಸಗಳಿಗೆ ಸಂಬಂದಿಸಿದ ಎಲ್ಲ ಕೆಲಸಗಳನ್ನು ಮಾಡುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ವಾದ ಪತ್ರದಲ್ಲಿ ಪ್ರತಿವಾದಿಯ ಜಮೀನ ದಕ್ಷಿಣ ದಂಡೆ ಗುಂಟ ದಾವಾ ರಸ್ತೆ ಇದ್ದು ಅದನ್ನು ಸುಮಾರು 20 ವರ್ಷಗಳಿಂದ ಉಪಬೋಗಿಸುತ್ತಾ ಬಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ದಾವಾ ರಸ್ತೆ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಕೂಡಿಸಿದ ಟಿಸಿ ತೇರವುಗೊಳಿಸಲು ನಾನು ಕೆಇಬಿ ಅವರಿಗೆ ಒಂದು ಅರ್ಜಿ ಸಲ್ಲಿಸಿದ್ದೇ ಎಂದರೆ ಸರಿಯಲ್ಲ. ವಾದ ಪತ್ರದ ಜೋತೆಗೆ ಹಾಜರುಪಡಿಸಿದ ಕೈ ನಕಾಶೆ ತೋರಿಸಿ ಸಾಕ್ಷಿಗೆ ಕೇಳಲಾಗಿ ಸಾಕ್ಷಿ ತಾನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಕೈ ನಕಾಶೆ ಸರಿ ಇದೆಯಾ ಎಂಬ ಪ್ರಶ್ನೇಗೆ ಸಾಕ್ಷಿ ಅದು ತಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ರಸ್ತೆ ಬೇಕು ಎಂದು ದಾಖಲಿಸಿದ್ದೇನೆ. ನಾನು ಹಾಜರುಪಡಿಸಿ ಗುರುತಿಸಿಕೊಂಡ ನಿ.ಪಿ. 4 ರಿಂದ 8 ದಾವಾ ಆಸ್ತಿಗೆ ಸಂಬಂದಿಸಿದ್ದಲ್ಲ ಎಂದರೆ ಸಾಕ್ಷಿ ತಾನು ಯಾವುದೇ ಪೋಟೋ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದು ಪ್ರತಿವಾದಿಯ ಮನೆ ಎಂದು ಹೇಳಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪೋಟೋ ನಿ.ಡಿ. 1 ಎಂದು ಗುರುತಿಸಲಾಯಿತು. ಅದೇ ರೀತಿ ಪತ್ರಾಸ ಶೆಡ್ಡ ಇರುವ ಪೋಟೋ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಡಿ. 2 ಎಂದು ಗುರುತಿಸಲಾಯಿತು.

ಅದೇ ರೀತಿ ಟಿಸಿ ಇರುವ ಪೋಟೋ ನೋಡಿ ಸಾಕ್ಷಿ ಅದು ಪ್ರತಿವಾದಿ ಕೂಡಿಸಿದ್ದಾನೆ ಎಂದು ನುಡಿದಿದ್ದು ಸದರಿ ಪೋಟೋವನ್ನು ನಿ.ಡಿ. 3 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ